ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಉಳಿತಾಯವಾದ ಹಣವನ್ನು ಅಣೆ ಕಟ್ಟೆಗೇ ಉಪಯೋಗಿಸುತ್ತೀರೋ ಅಥವಾ ಬೇರೆ ಕೆಲಸಕ್ಕೆ ಉಪಯೋಗಿಸುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪ.—ಅಣೆ ಕಟ್ಟಿಗೆ ಬೇಕಾದರೆ ಅಣೆ ಕಟ್ಟಿಗೆ ಉಪಯೋಗಿಸುತ್ತೇವೆ ; ಇಲ್ಲದಿದ್ದರೆ ಬೇರೆ ಕೆಲಸಕ್ಕೆ ಉಪಯೋಗಿಸುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಎಡಗಡೆ ಭಾಗದಲ್ಲಿ ಎಷ್ಟು ಎಕರೆ ತರೀ ಜಮೀನು ಸಾಗುವಳಿಯಾಗುತ್ತದೆ ; ಎಷ್ಟು ಎಕರೆ ಖುಷ್ಕಿ ಜಮೀನು ಸಾಗುವಳಿಯಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಆಗಿರುವುದನ್ನು ಹೇಳಿದ್ದೇನೆ. ಇನ್ನೂ ಆಗಬೇಕಾದದ್ದನ್ನೂ ಸೇರಿಸಿ 21,300 ಎಕರೆಗಳಾಗುತ್ತವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಎಡಗಡೆ ಭಾಗದಲ್ಲಿ ಎಷ್ಟು, ಬಲಗಡೆ ಭಾಗದಲ್ಲಿ ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಎಡಗಡೆ ನಾಲೆ 63 ಮೈಲಿ ಹೋಗುತ್ತದೆ ; ಸುಮಾರು 16,500 ಎಕರೆ ಸಾಗುವಳಿ ಯಾಗುತ್ತದೆ ; ಬಲದಡದ ನಾಲೆ 32 ಮೈಲಿ ಹೋಗುತ್ತದೆ. ಸುಮಾರು 5000 ಎಕರೆ ಸಾಗುವಳಿ ಯಾಗಬಹುದೆಂಬ ನಿರೀಕ್ಷೆಯಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಬಾಕಿ ಉಳಿದಿರತಕ್ಕ ಧಾನರ್ ಅಣೆಕಟ್ಟಿನ ಭಾಗವನ್ನು ಈ ವರ್ಷವೇ ಸಂಪೂರ್ಣವಾಗಿ ಮುಗಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ 34 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇಷ್ಟು ಹಣ ಸಾಕಾಗುತ್ತದೆಂದು ನಾನು ನಂಬುವುದಿಲ್ಲ. ಉಳಿದಿದ್ದನ್ನು ಹಣವದಗಿದರೆ ಮುಂದಿನ ವರ್ಷ, ಇಲ್ಲದಿದ್ದರೆ ಅದರ ಮುಂದಿನ ವರ್ಷ ಪೂರೈಸುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಶಿವಮೊಗ್ಗ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಮಳೆ ಬಾರದಿರುವುದರಿಂದ ಈ ಧಾನರ್ ಕೆಲಸವನ್ನು ಕೈಕೊಂಡು ರೈತರಿಗೆ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನೇ ಯೋಚನೆ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ರಿಲೀಫ್ ಕಾಮಗಾರಿಗಳಿಗೆಂದು ಹಣಕೊಡುವುದಾಗಿ ಹೇಳಿದ್ದಾರೆ; ಅದನ್ನು ಕೊಡುವುದಾದರೆ ಹೊನ್ನಾಳಿ ತಾಲ್ಲೂಕಿನ ಕ್ಷೇಮ ಪ್ರದೇಶದಲ್ಲೂ ಧಾನರ್ ಕೆಲಸವನ್ನು ಕೈಕೊಳ್ಳಬೇಕೆಂದು ಮಾಡಿದ್ದೇವೆ.

Efficiency Audit of Kanakapura Municipality.

Q.—198. Sri K. G. THIMME GOWDA (Kanakapura).—

Will the Government be pleased to state :—

(*a*) whether it is a fact that an efficiency audit took place with regard to Kanakapura Municipality ;

(*b*) if so, what are the findings of the efficiency audit ;

(*c*) the action taken with regard to such persons, if any, who have misused Municipal funds ?

A.—Sri KADIDAL MANJAPPA (Minister for Revenue and Public Works).—

(*a*) In the light of the audit of the accounts of the Municipality conducted by the State Accounts Department, the Efficiency Audit Branch was required to investigate into the affairs of the Municipality.

(*b*) No final orders are passed on the report as yet.

(*c*) The report of the Efficiency Audit Branch is under the consideration of Government.

ಶ್ರೀ ಕೆ. ಜಿ. ತಿಮ್ಮೇಗೌಡ.—ನನ್ನ (ಬಿ) ಪ್ರಶ್ನೆಯಲ್ಲಿ "if so, what are the findings of the efficiency audit" ಎಂದು ಕೇಳಿದ್ದೇನೆ. ಇದಕ್ಕೆ ಉತ್ತರವಾಗಿ "No final orders are passed on the report as yet" ಎಂದು ಹೇಳಿದರೆ, ಇದರ ಅರ್ಥವೇನು ?

Sri KADIDAL MANJAPPA.—It is not usual to disclose the report of the Efficiency Audit before a final order is passed. He has sent his report. It is under the consideration of Government.

ಶ್ರೀ ಕೆ. ಜಿ. ತಿಮ್ಮೇಗೌಡ.—Efficiency Audit ಮಾಡಿದ್ದರಲ್ಲಿ ಕೆಲವರ ಮೇಲೆ ಅಪಾದನೆಗಳು ಬಂದಿದ್ದರೆ ಅವರುಗಳ ಮೇಲೆ ಸರ್ಕಾರದವರು ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಕೆ. ಜಿ. ತಿಮ್ಮೇಗೌಡ.—ಎಫಿಷಿಯನ್ಸಿ ಆಡಿಟ್ಟಿನವರ ವರದಿಯನ್ನು ಈ ಸಭೆಯ ಮುಂದೆ ಇಡುವುದಕ್ಕಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರಿ ಆರ್ಡರ್ ಆದಮೇಲೆ ಅದನ್ನು ಯೋಚನೆ ಮಾಡಬೇಕು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಎಫಿಷಿಯನ್ಸಿ ಆಡಿಟ್ಟನ್ನು ಮಾಡಿದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷ ಆಯಿತು.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ವರ್ಷವೆಲ್ಲಾ ಸರ್ಕಾರದವರ ಪರ್ಯಾಲೋಚನೆಯಲ್ಲದ್ದು ಇನ್ನೂ ಅಖೈರ್ ಆರ್ಡರ್ ಆಗಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಅವರ ರದಿ ಬಂದದ್ದು ಮೊನ್ನೆ, ಮೇ ತಿಂಗಳಲ್ಲಿ.

ಶ್ರೀ ಎಸ್. ಸಿದ್ದಪ್ಪ —ಆಡಿಟ್ ರಿಪೋರ್ಟ್ ಸರ್ಕಾರದವರಿಗೆ ಬಂದು ಎರಡು—ಮೂರು ವರ್ಷವಾದರೂ ಇನ್ನೂ ತೀರ್ಮಾನವಾಗದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಎರಡು—ಮೂರು ವರ್ಷವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಇದಲ್ಲದೆ ಇನ್ನೂ ಅನೇಕ ಸಂದರ್ಭಗಳಲ್ಲಿ ಹೀಗೆ ನಿಧಾನವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿಲ್ಲ.

Road Cess Accounts.

Q.—257. Sri G. A. THIMMAPPA GOWDA (Arkalgud).—

Will the Government be pleased to state :—

(*a*) the total Road Cess levied and collected annually in the State;

(*b*) the total amount spent for repairing the roads annually in the State ? (The above figures may kindly be given districtwar separately).

A.—Sri KADIDAL MANJAPPA (Minister for Revenue and Public Works).—

(*a*)—

	1950-51
	Rs.
Mileage Cess ..	6,89,500
Road Tax on lorries ..	1,11,000
Total ..	8,00,500

1951-52	1952-53
Rs.	Rs.
15,10,078	17,07,200
8,82,567	8,63,300
23,92,645	25,70,500

(*b*) Statement appended.